ಮೈಸೂರು ವಿಧಾನ ಸಭೆ

MYSORE LEGISLATIVE ASSEMBLY

Monday, 28th May 1973/Jaishta 7,1895 Sakaera

The House met in the Assembly Chamber, Vidhana Soudha, at One of the Clock.

MADAM SPEAKER.—[Smt. K. S. Nagarathnamma] in the Chair.

STARRED QUESTIONS

(To which oral Answers were given)

HARIJAN CO-OPERATIVE HOUSING SOCIETY, BIJAPUR.

772. SRI J. L. KABADE (Ballolli).—Will the Minister for Co-operation be pleased to state :

(*a*) Whether it is a fact that the Harijan Co-operative Housing Society, Bijapur has not given any house sites even to the Chief Promoters of Shramajeevigala Co-operative Society ;

(*b*) if so, the action Government has taken against the society in regard to the non-allotment of sites to the houseless persons ?

SRI A. SHANRARA ALVA.—(Minister for Co-operation)

(*a*) No.

(*b*) Does not arise in view of reply to clause (*a*).

ಶ್ರೀ ಜೆ.ಎಲ್. ಕಬಾಡಿ.—ಬಿಜಾಪುರದ ಹರಿಜನ ಸಹಕಾರೀ ಗೃಹನಿರ್ಮಾಣ ಸಂಘವು ಶ್ರಮಜೀವಿಗಳ ಸಹಕಾರೀ ಸಂಘದ ಪ್ರಧಾನ ಪ್ರವರ್ತಕರಿಗೆ ನಿವೇಶನಗಳನ್ನು ನೀಡದಿರುವುದು ನಿಜವೇ—ಎಂದು ಪ್ರಶ್ನೆ ಕೇಳಿದ್ದುದಕ್ಕೆ—ನಿಜವಲ್ಲ ಎಂದು ಉತ್ತರವನ್ನು ಕೊಟ್ಟಿದ್ದಾರೆ. ಈ ಶ್ರಮಜೀವಿಗಳ ಸಂಘದ ಚೀಫ್ ಪ್ರಮೋಟರ್ ಯಾರು—ಅವರಿಗೆ ನಿವೇಶನಗಳಿದ್ದವೇ ?

† SRI A. SHANKAR ALVA.—The paid up share capital of this Society is Rs. 38,637. The Society has borrowed a loan of Rs. 1 ,01 500 in respect of 387 members. So far 188 houses have been completed constructed and 197 houses are under construction in different stagesy ಇವರಲ್ಲಿ ಯಾರು ಯಾರಿಗೆ ಮನೆಗಳಿರಲಿಲ್ಲವೋ ಅವರಿಗೆ ಮಾತ್ರ ಕೊಟ್ಟಿದ್ದಾರೆ ೯ ಜನ ಪ್ರಮೋಟರಿಗೆ, ಮನೆಗಳಿದ್ದುದರಿಂದ ಅವರಿಗೆ ಮಾತ್ರ ಕೊಟ್ಟಿಲ್ಲ.

SRI J. L. KABADE.—Who are this Chief Promoters ? ಅವರಲ್ಲಿ ಎಷ್ಟು ಜನರಿಗೆ ನಿವೇಶನಗಳಿದ್ದವು ?

ಶ್ರೀ ಎ. ಶಂಕರ ಆಳ್ವ.—ಆ ವಿವರಗಳು ನನ್ನಲ್ಲಿಲ್ಲ. ಆದರ ಈ ಪ್ರಮೋಟರ್ಸ್‌ಗಳಲ್ಲಿ ೯ ಜನರಿಗೆ ಮನೆಗಳಿದ್ದುದರಿಂದ ಅವರಿಗೆ ಮಾತ್ರ ಕೊಟ್ಟಿಲ್ಲ.

ಅಧ್ಯಕ್ಷರು.—ಅವರು ಕೇಳುತ್ತಿರುವುದು ಚೀಫ್ ಪ್ರಮೋಟರ್ ಯಾರು ಎಂದು.

ಶ್ರೀ ಎ. ಶಂಕರ ಆಳ್ವ.—ಆ ಹೆಸರುಗಳು ನನ್ನಲ್ಲಿಲ್ಲ.

ಶ್ರೀ ಜೆ. ಎಲ್. ಕಬಾಡಿ.—ಮೊದಲು ಇದ್ದದ್ದು ಬಿಜಾಪುರದ ಶ್ರಮಜೀವಿಗಳ ಸಹಕಾರೀ ಸಂಘ ಎಂದು. ಇಲ್ಲಿಗೆ ಮೂರು ವರ್ಷಗಳ ಕೆಳಗೆ ಆ ಶ್ರಮಜೀವಿಗಳ ಸಹಕಾರ ಸಂಘವು ಹರಿಜನ ಸಹಕಾರೀ ಗೃಹನಿರ್ಮಾಣ ಸಂಘವಾಗಿ ಪರಿವರ್ತನೆಯಾಯಿತು. ಹಾಗೆ ಆಗುವುದಕ್ಕೆ ಮೊದಲು ಆ ಶ್ರಮಜೀವೀ ಸಹಕಾರಿ ಸಂಘಕ್ಕೆ ಇದ್ದ ಚೀಫ್ ಪ್ರಮೂಟರ್ ಯಾರು ? ಒಬ್ಬರಿದ್ದರೆ ? ಅನೇಕ ಜನರಿದ್ದರೇ ?

ಶ್ರೀ ಎ. ಶಂಕರ ಆಳ್ವ.—ಮಾನ್ಯ ಸದಸ್ಯರು ಹೆಸರನ್ನು ಕೇಳಿರುವುದಿಲ್ಲ. ಆ ಪ್ರಮೋಟರ್ಸ್‌ಗಳಲ್ಲಿ ೯ ಜನರಿಗೆ ಮನೆಗಳ ಅನುಕೂಲ ಉಂಟು ಎಂದು. ನಿವೇತನಗಳನ್ನು ಕೊಟ್ಟಿಲ್ಲ.

ಶ್ರೀ ಜೆ. ಎಲ್. ಕಬಾಡಿ.—ಮಾನ್ಯ ಸಚಿವರು ನನ್ನ ಪ್ರಶ್ನೆಯನ್ನೇ ಸರಿಯಾಗಿ ಅರ್ಥಮಾಡಿಕೊಂಡಿಲ್ಲ ಚೀಫ್ ಪ್ರಮೂಟರ್ ಯಾವಾಗಲೂ ಒಬ್ಬರೇ ಇರುವುದು. ಅವರ ಹೆಸರಲ್ಲಿ ದುಡ್ಡನ್ನು ಡೆಪಾಜಿಟ್ ಮಾಡಲಾಗುವುದೂ.

SRI J. L KABADE.—Chief Promotor is the only promoter who can form the society along with other Members. Nine members cannot be chief promotors in the society. Chief promoter is only one man. ೯ ಜನರ ಹೆಸರಿನಲ್ಲಿ ದುಡ್ಡನ್ನು ಕಟ್ಟುವುದಕ್ಕೆ ಅವಕಾಶವಿಲ್ಲ. ಇವರಲ್ಲಿ ನಾನು ಕೇಳತಕ್ಕ ಇನ್‌ಫರ್‌ಮೇಷನ್ ಇದ್ದರೆ ತಿಳಿಸಲಿ. ಇಲ್ಲದಿದ್ದರೆ ತರಸಿಕೊಡಲಿ.

ಶ್ರೀ ಎ. ಶಂಕರ ಆಳ್ವ.—ಮಾನ್ಯ ಸದಸ್ಯರು ಹೆಸರನ್ನು ಒಡಗಿಸಬೇಕೆಂದು ಅವರ ಪ್ರಶ್ನೆಯಲ್ಲಿ ಕೇಳಿ.

ಅಧ್ಯಕ್ಷರು.—ತಾವು ಬೇರೆ ಪ್ರಶ್ನೆಗಳೇನಾದರೂ ಇದ್ದರೆ ಕೇಳಬಹುದು.

ಶ್ರೀ ಜೆ. ಎಲ್. ಕಬಾಡಿ.—ನನಗೆ ಮುಖ್ಯವಾಗಿ ಬೇಕಾಗಿದ್ದುದೇ ಆದು ?

ಶ್ರೀ ಎ. ಶಂಕರ ಆಳ್ವ.—ಆದಕ್ಕೆ ಪ್ರತ್ಯೇಕ ಪ್ರಶ್ನೆ ಹಾಕಲಿ ಉತ್ತರ ಒದಗಿಸಲಾಗುವುದು.

ಶ್ರೀ ಜೆ. ಎಲ್. ಕಬಾಡಿ.—ಚೀಫ್ ಪ್ರಮೋಟರ್ಸ್ ಎಂದು ಪ್ರಶ್ನೆಯಲ್ಲಿರುವುದರಿಂದ ಆದಕ್ಕೆ ಉತ್ತರವಿರಬೇಕು. ಒಂದೊಂದು ಪ್ರಶ್ನೆಗೆ ಉತ್ತರ ಬರಲು ನಾಲ್ಕೈದು ತಿಂಗಳಾಗುತ್ತಿದೆ. ಪೂರ್ಣವಾದ ಇನ್‌ಫರ್ಮೇಷನ್ ಕೊಡದಿರುವುದರಿಂದ ನಿಜವಾಗಿಯೂ ವ್ಯಥೆಯಾಗುತ್ತಿದೆ.

ಅಧ್ಯಕ್ಷರು.—ಒರಿಜನಲ್ ಪ್ರಶ್ನೆಯಲ್ಲೂ ಸಹ ಚೀಫ್ ಪ್ರಮೋಟರ್ಸ್ ಎಂತಲೇ ಇದೆ.

ಶ್ರೀ ಜೆ. ಎಲ್. ಕಬಾಡಿ.—ಚೀಫ್ ಪ್ರಮೋಟರ್ಸ್ ಯಾರು ?

ಶ್ರೀ ಎ. ಶಂಕರ ಆಳ್ವ.—ನೋಟೀಸ್.

ಶ್ರೀ ಜೆ. ಎಲ್. ಕಬಾಡಿ.—ಬಿಜಾಪುರ ಪಹರಿನಲ್ಲಿರುವ ಜನರಿಗೆ ಮನೆಯಿಲ್ಲವೆಂದು ಈ ಒಂದು ಸಂಘ ಸ್ಥಾಪಿಸಿದಾಗ ಅಧಿಕಾರಗಳು ಸೇರಿಕೊಂಡು ತೇಕಡ ೭೫–೮೦ ರಷ್ಟು ಅಧಿಕಾರಿಗಳಿಗೆ ಅನುಕೂಲಮಾಡಿ ಕೊಟ್ಟಿರುವುದು ಗಮನಕ್ಕೆ ಬಂದಿದೆಯೇ ?

ಶ್ರೀ ಎ. ಶಂಕರ ಆಳ್ವ.—ಗೊತ್ತಿಲ್ಲ.

ಶ್ರೀ ಜೆ. ಎಲ್. ಕಬಾಡಿ.—ವಿಚಾರ ಗೊತ್ತಾದರೆ ಕ್ರಮವೇನು ತೆಗೆದುಕೊಳ್ಳುತ್ತೀರಿ ?

ಶ್ರೀ ಎ. ಶಂಕರ ಆಳ್ವ.—ಕಾನೂನಿಗೆ ವಿರೋಧವಾಗಿದ್ದರೆ ಸೂಕ್ತ ಕ್ರಮ ತೆಗೆದುಕೊಳ್ಳುತ್ತೇವೆ.

ಶ್ರೀ ಜೆ. ಎಲ್. ಕಬಾಡಿ.—ಕ್ರಮ ತೆಗೆದು ಕೊಳ್ಳಲು ಎಷ್ಟು ದಿವಸ ಬೇಕು.

ಶ್ರೀ ಎ ಶಂಕರ ಆಳ್ವ.—ಆದಷ್ಟು ಬೇಗ.

ಶ್ರೀ ಜೆ. ಎಲ್. ಕಬಾಡಿ.—ಮೂರುವರೆ ಸಾವಿರ ರೂಪಾಯಿ ದುರುಪಯೋಗ ಈ ಸಂಘದಲ್ಲಿ ಆಗಿರುವಾಗ ಸರಕಾರ ಎಷ್ಟು ದಿವಸದಲ್ಲಿ ಕ್ರಮ ತೆಗೆದುಕೊಳ್ಳುವುದು ?

ಶ್ರೀ ಎ. ಶಂಕರ ಆಳ್ವ.--ಆದಷ್ಟು ಬೇಗ. ನಿರ್ದಿಷ್ಟವಾಗಿ ಹೇಳುವುದಕ್ಕಾಗುವುದಿಲ್ಲ.

ENQUIRY AGAINST MYSORE POWER LOOM SILK MANUFACTURERS COOPERATIVE SOCIETY

983. SRI M. SIDDAMADAIAH (Kollegal).—Will the *Minister for Co-operation be pleased to state.—

The reasons fer not conducting any kind of enquiry so far even though the Co-operation department has seized the books of accounts of the Mysore Power Loom Co-operative Society Limited, Avenue Road, Bangalore for misuse of silk meant for distribution to licensees?

SRI A. SHNNKARA ALVA (Minister for Co-operasion).—There is no society by name Mysore Power Loom Co-operative Society Limited, Avenue Road, Bangalore. But there is a Society by name Mysore Power Loom Silk Manufacturers C -operative Society Limited, Avenue Road, Bangalore. The books of accounts of this Society have been seized on suspicion that the silk meant for distribution to licensees has been misused and an enquiry is being conducted. The enquiry is not yet completed.

ಶ್ರೀ ಎಂ. ಸಿದ್ದಮಾದಯ್ಯ : ಲೆಕ್ಕಪತ್ರಗಳನ್ನು ವಶಪಡಿಸಿಕೊಂಡು ಐದಾರು ತಿಂಗಳಾದರೂ ಕೂಡ ಇನ್ನೂ ತನಿಖೆ ಪೂರ್ತಿಯಾಗದಿರಲು ಕಾರಣವೇನು ?

† ಶ್ರೀ ಎ. ಶಂಕರ ಆಳ್ವ : ಡೆಪ್ಯುಟಿ ರಿಜಿಸ್ಟ್ರಾರರು ತನಿಖೆ ಮಾಡುತ್ತಿದ್ದಾರೆ. ತನಿಖೆ ವರದಿ ಬಂದ ಮೇಲೆ ಯಾವ ರೀತಿಯ ಕ್ರಮ ತೆಗೆದುಕೊಳ್ಳಬೇಕೆಂಬುದನ್ನು ನಿರ್ಧಾರಮಾಡುವರು.

ಶ್ರೀ ಎಂ. ಸಿದ್ದಮಾದಯ್ಯ : ಒಂದೆರಡು ತಿಂಗಳಲ್ಲ ೬ ತಿಂಗಳಾಗಿದೆ ಇನ್ನೂ ಕ್ರಮ ತೆಗೆದುಕೊಳ್ಳದಿರಲು ಕಾರಣವೇನು ?

ಶ್ರೀ ಎ. ಶಂಕರ ಆಳ್ವ :—ಇನ್ನೂ ತನಿಖೆ ಪೂರ್ತಿಯಾಗಿಲ್ಲ ಆದಾದಮೇಲೆ ಕ್ರಮ ತೆಗೆದುಕೊಳ್ಳುತ್ತೇವೆ ನೂಲು ಹಂಚಿಕೆ ಮಾಡಲು ಆಸಿಸ್ಟೆಂಟ್ ರಿಜಿಸ್ಟ್ರಾರರನ್ನು ಹಾಕಿದ್ದೇವೆ ತನಿಖೆ ಮುಗಿಯಲು ಸಮಯಬೇಕು.

ಶ್ರೀ ಎಂ. ಸಿದ್ದಮಾದಯ್ಯ :—ಇದೇ ರೀತಿಯಲ್ಲಿ ಇನ್ನೂ ಕೆಲವು ಸೊಸೈಟಿಗಳಲ್ಲಿ ಅಕ್ರಮ ನಡೆದಿರುವುದು ಗಮನಕ್ಕೆ ಬಂದಿದೆಯೇ ?

ಶ್ರೀ ಎ. ಶಂಕರ ಆಳ್ವ ;—ಯಾವ ಸೊಸೈಟಿ ಎಂದು ಹೇಳಿದರೆ ವಿಚಾರಿಸಿ ಹೇಳಬಹುದು.

---

* Astiriks indicate that remarks or speeches have not been revised by the member concernced.